ಡಿಡಬ್ಲ್ಯೂ-1

**ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್.ಐ.ಎ. ಪಿರ್ಯಾದುದಾರರ ಪರ ವಕೀಲರಿಂದಃ**

1. ನನ್ನ ಹೆಸರಿನಲ್ಲಿ ಕೃಷಿ ಜಮೀನು ಜಂಟಿ ಖಾತೆಯಲ್ಲಿ ಇದೆ ಎಂದರೆ ಸರಿ. ನಾನು ಕೆನರಾ ಬ್ಯಾಂಕ್‌ನಲ್ಲಿ ಹಣದ ವ್ಯವಹಾರಕ್ಕಾಗಿ ಒಂದು ಖಾತೆಯನ್ನು ಹೊಂದಿರುತ್ತೇನೆ. ಟ್ರ್ಯಾಕ್ಟರನ್ನು 2016 ನೇ ಇಸ್ವಿಯಲ್ಲಿ ತೆಗೆದುಕೊಂಡಿರುತ್ತೇನೆ. ಅದು ಯಾವ ಕಂಪನಿಯದು ಎಂದರೆ ಸಾಕ್ಷಿಯು ಐಶರ್ ಕಂಪನಿಯದು ಇರುತ್ತದೆ ಎಂದು ನುಡಿಯುತ್ತಾರೆ. ಯಾವ ಶೋ ರೂಂನಲ್ಲಿ ತೆಗೆದುಕೊಂಡಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮಣಿಕಂಠ ಶೋ ರೂಂ ನಿಂದ ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದ್ರಿ ಟ್ರ್ಯಾಕ್ಟರನ್ನು ಲೋನ ಮಾಡಿ ತೆಗೆದುಕೊಂಡಿರುತ್ತೇನೆ. ಸದ್ರಿ ಲೋನನ್ನು ಎಲ್ ಆ್ಯಂಡ್ ಟಿ ಫೈನಾನ್ಸನಲ್ಲಿ ಪಡೆದಿರುತ್ತೇನೆ. ಟ್ರ್ಯಾಕ್ಟರನ ಒಟ್ಟು ಮೌಲ್ಯ ರೂ.6,75,000/- ಗಳು ಆಗಿರುತ್ತದೆ. ಸದ್ರಿ ಟ್ರ್ಯಾಕ್ಟರಗೆ ಇತರೆ ಬಿಡಿ ಭಾಗಗಳಿಗೆ (Accessories) ಎಷ್ಟು ಮೊತ್ತ ಆಗಿರುತ್ತದೆ ಎಂದರೆ ಸಾಕ್ಷಿಯು ಎಲ್ಲ ಸೇರಿ ರೂ. 6,75,000/- ಗಳು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಟ್ರ್ಯಾಕ್ಟರನ ಒಟ್ಟು ಮಾರಾಟದ ಮೌಲ್ಯಕ್ಕೆ ಶೇಕಡಾ ಎಷ್ಟು ಡಿಸ್ಕೌಂಟ ಕೊಟ್ಟಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಟ್ಟು ಮೌಲ್ಯ ರೂ.6,75,000/- ಗಳಿಗೆ ರೂ.1,97,181/- ಗಳ ಡಿಸ್ಕೌಂಟ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಟ್ರ್ಯಾಕ್ಟರ ಖರೀದಿ ಮಾಡಿದ ಮೊತ್ತದಲ್ಲಿ ಯಾವುದೇ ಹಣ ಕೊಡುವುದು ಬಾಕಿ ಇರಲಿಲ್ಲ ಎಂದರೆ ಸರಿ.

2. ಟ್ರ್ಯಾಕ್ಟರ ಖರೀದಿ ಮಾಡುವ ಕಾಲಕ್ಕೆ ಸದ್ರಿ ಶೋ ರೂಂನವರು ಚೆಕ್ ಕೇಳಿದ್ದಕ್ಕೆ ನಾನು ಚೆಕ್ ಕೊಡುವುದಿಲ್ಲ ಎಂದು ತಕರಾರು ಮಾಡಿಲ್ಲ. ನಮ್ಮ ಮನೆಗೆ ಟ್ರ್ಯಾಕ್ಟರ ಸಾಲದ ವಸೂಲಿಗೆ ಯಾರು ಬಂದಿಲ್ಲ. ನಿಪಿ-1 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ ಸದ್ರಿ ಸಹಿಯನ್ನು ಈಗಾಗಲೇ ನಿಪಿ-1(ಎ) ಎಂದು ಗುರುತಿಸಲಾಗಿರುತ್ತದೆ. ಸದ್ರಿ ಚೆಕ್

ಡಿಡಬ್ಲ್ಯೂ-1

ಪಿರ್ಯಾದುದಾರರು ಬ್ಯಾಂಕಗೆ ಹಾಕಿದಾಗ, ಖಾತೆಯಲ್ಲಿ ಹಣ ಇಲ್ಲ ಎಂದು ಹಿಂಬರಹ ಬಂದಿದ್ದು, ಆಗ ಸದ್ರಿಯವರು ನನಗೆ ಸದ್ರಿ ವಿಚಾರವನ್ನು ತಿಳಿಸಿದಾಗ ನಾನು ಇನ್ನೊಮ್ಮೆ ಚೆಕ್‌ನ್ನು ಹಾಜರು ಪಡಿಸಿ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಸದ್ರಿ ಚೆಕ್‌ನ್ನು ಮತ್ತೊಂದು ಸಲ ಹಾಕಿದಾಗ, ಅಕೌಂಟ ಕ್ಲೋಸ್ಡ ಎಂದು ಹಿಂಬರಹ ಬಂದಿತ್ತು ಎಂದರೆ ಸಾಕ್ಷಿಯು ನನ್ನ ಬಳಿ ಯಾರು ಬಂದಿಲ್ಲ ಎಂದು ನುಡಿಯುತ್ತಾರೆ. ಚೆಕ್‌ಗೆ ಸಂಬಂಧಿಸಿದಂತೆ ಪಿರ್ಯಾದುದಾರರು ನನಗೆ ನೋಟಿಸ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಯಾವುದೆ ನೋಟಿಸ ಬಂದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-7 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಸಾಕ್ಷಿಯು ಸದ್ರಿ ಸಹಿ ತನ್ನದೇ ಎಂದು ಗುರುತಿಸಿರುತ್ತಾರೆ. ಆದ್ದರಿಂದ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**3.** ನಾನು ಪಿರ್ಯಾದುದಾರರ ಶೋ ರೂಂಗೆ ಕೊಟ್ಟ ಚೆಕ್‌ನ್ನು ವಾಪಸ್ಸ ಕೊಡುವಂತೆ ಕೇಳಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕೇಳಿದ್ದೇನೆ ಎಂದು ನುಡಿಯುತ್ತಾರೆ. ಅವರು ಸದ್ರಿ ಚೆಕ್‌ನ್ನು ವಾಪಸ್ಸ ಕೊಡಲಿಲ್ಲ ಎಂದು ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡಿಲ್ಲ. ಆ ರೀತಿ ಕಾನೂನು ಕ್ರಮ ತೆಗೆದುಕೊಳ್ಳಲು ಏನು ತೊಂದರೆ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಏನು ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ಪಿರ್ಯಾದುದಾರರಿಗೆ ಚೆಕ್‌ನ ಮೊತ್ತವನ್ನು ಕೊಡುವುದು ಬಾಕಿ ಇದೆ ಎಂದು ಗೊತ್ತಿದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.